# ಪುಟಾಣಿ ಭಗವದ್ಗೀತೆ ಪುಸ್ತಕ



ಕಳೆದ ವರ್ಷ ನಾನು ಕ್ಯಾಲಿಫೋರ್ನಿಯಾದ ಸ್ಯಾನ್ ಬ್ರೂನೋ ಪಟ್ಟಣದ ಭಾರತೀಯ ಮಳಿಗೆಗೆ ಗೃಹಬಳಕೆಯ ಕೆಲವು ವಸ್ತುಗಳನ್ನು ಕೊಳ್ಳಲು ಹೋಗಿದ್ದೆ. ಹಾಗೆಯೇ ನನ್ನ ದೃಷ್ಟಿ ಒಂದು ಪುಟ್ಟ ಪುಸ್ತಕದ ಮೇಲೆ ಬಿತ್ತು. ಆಕರ್ಷಕವಾದ ಅತೀ ಪುಟಾಣಿ ಪುಸ್ತಕ ಅದು. ಆ ಪುಸ್ತಕ ಮತ್ತ್ಯಾವುದೂ ಅಲ್ಲ ನಮ್ಮ ಹೆಮ್ಮೆಯ ಭಗವದ್ಗೀತೆ. ಸರಿಸುಮಾರು ಹನ್ನೆರಡು ಸಾವಿರ ಕಿಲೋಮೀಟರ್ ದೂರದಲ್ಲಿ ಆ ಪುಸ್ತಕ ನೋಡಿ, ಕೊಳ್ಳದಿರಲು ಮನಸ್ಸು ಒಪ್ಪಲಿಲ್ಲ. 3.99 ಯುಎಸ್ ಡಾಲರ್ ಕೊಟ್ಟು ಖರೀದಿಸಿದೆ. 1x1/2 ಸೆಂಟಿ ಮೀಟರ್ ಅಳತೆಯ ಪುಸ್ತಕದ ಮೂಲ ನೋಡಿದರೆ ಅದು ಪ್ರಕಟವಾದದ್ದು ನಮ್ಮ ಬೃಹನ್ಮುಂಬೈ ನಗರದಲ್ಲಿ!. ನನಗೆ ಗೊತ್ತಾದದ್ದು ಅಮೆರಿಕಾದಲ್ಲಿ. ಅಮೆರಿಕಾದಿಂದ ಮರಳಿ ಬಂದ ನಂತರ ಮುಂಬೈ ಕಚೇರಿಯನ್ನು ಸಂಪರ್ಕಿಸಿ ಹತ್ತು ಪ್ರತಿಗಳನ್ನು ತರಿಸಿಕೊಂಡೆ ಅದೀಗ ನನ್ನ ಸಂಗ್ರಹದಲ್ಲಿರುವ ಅತೀ ಪುಟ್ಟ ಪುಸ್ತಕ

—ಅರವಿಂದ ದೀಕ್ಷಿತ್, ಚಿಕ್ಕಮಗಳೂರು



# ಮೌನ ಸಂದೇಶ

ತಮ್ಮ ಕದಂಬ ಬಾಹುವಿನಲ್ಲಿ ಎತ್ತಿ ಹಿಡಿದ ಈ ಭೂಗೋಳಕ್ಕೆ ಪರಿಸರ ಮಾಲಿನ್ಯವಾಗದಿರಲೆಂಬುದು ಯುವತಿಯರ ಮಹದಾಸೆಯಾಗಿದೆ. ಜಲ ಮಾಲಿನ್ಯ ವಾಯು ಮಾಲಿನ್ಯ ಮುಕ್ತವಾಗಿದ್ದರೆ ಅಲ್ಲಿ ಗಿಡಮರ ಸಮೃದ್ಧಿಯಾಗಿ ಬೆಳೆದರೆ ವನ್ಯ ಮೃಗಗಳು ಸಲೀಸಾಗಿ ಬದುಕಬಹುದು. ಆ ಅಪೂರ್ವ ಕ್ಷಣಕ್ಕಾಗಿ ಜಿಂಕೆ ಮರಿಗಳು ತಲೆಯತ್ತಿ ತದೇಕಚಿತ್ತದಿಂದ ಆ ದೃಶ್ಯ ನೋಡಿ ನಮಗೂ ಬದುಕಲು ಬಿಡಿ ಎಂದು ಆರ್ತನಾದದಿಂದ ಮಾನವನಿಗೆ ಮೌನ ಸಂದೇಶ ನೀಡುತ್ತಿದೆ. ಇದು ಚಾಮರಾಜನಗರ ಜಿಲ್ಲ ಆಡಳಿತ ಭವನದ ಹಿಂಭಾಗದಲ್ಲಿ ತಲೆಯತ್ತಿ ನಿಂತು ಈ ಸಂದೇಶ ಸಾರುತ್ತಿದೆ.

—ಮನೀಷಾ ಪಾಟೀಲ, ವಿಜಯಪುರ

## ನೀವೂ ಬರೆಯಿರಿ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ, ಜೊತೆಗೆ ಆ ಬರಹಕ್ಕೆ ಸಂಬಂಧಿಸಿದ ಚಿತ್ರವೂ ಇರಲೇಬೇಕು.

ವಿಳಾಸ:

**editorsu@sudha.co.in**

ಕಚೇರಿ ವಿಳಾಸ: ಸಂಪಾದಕರು, 'ಸುಧಾ' ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು. ಪಿನ್‌ಕೋಡ್ 560001